**Vijaya Karnataka, Bangalore, July 19 2009**

# ಟಾಟಾ ಐಟಿ ಶಾಲಾ ಕ್ವಿಜ್

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಪ್ರತಿ ವರ್ಷ ಶಾಲಾ ಮಕ್ಕಳಿಗಾಗಿ ನಡೆಸಿಕೊಡುವ ಐಟಿ ಕ್ವಿಜ್ ಈ ಬಾರಿ ಬೆಂಗಳೂರಿನಲ್ಲಿ ಜು. 29ರಂದು ನಡೆಯಲಿದೆ. 1999ರಲ್ಲಿ ಆರಂಭವಾದ ಟಿಸಿಎಸ್ ಐಟಿ ಕ್ವಿಜ್, ಇದೀಗ ಅಂತರ ಶಾಲಾ ಕ್ವಿಜ್ ಕ್ಷೇತ್ರದಲ್ಲಿ ಅಗ್ರ ಸ್ಥಾನ ಗಳಿಸಿದೆ. ಕಳೆದ ವರ್ಷ ಸಂಸ್ಥೆ www. tcsitwiz.com ಎಂಬ ವೆಬ್ ಸೈಟ್ ಸಹ ತೆರೆದಿದೆ. ರಾಷ್ಟ್ರಮಟ್ಟದ ಐಟಿ ಕ್ವಿಜ್ ಬೆಂಗಳೂರು ಸೇರಿದಂತೆ ಒಟ್ಟು 12 ನಗರಗಳಲ್ಲಿ ನಡೆಯಲಿದ್ದು, 2 ಲಕ್ಷ ಶಾಲಾ ಮಕ್ಕಳು ಪಾಲ್ಗೊಳ್ಳುವ ಅಂದಾಜಿದೆ. ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಜು. 29ರಂದು ಐಟಿ ಕ್ವಿಜ್ ನಡೆಯಲಿದ್ದು, 8-12 ನೇ ತರಗತಿವರೆಗಿನವರು ಉಚಿತವಾಗಿ ಪಾಲ್ಗೊಳ್ಳಬಹುದಾಗಿದೆ. ಮೊದಲು ಬಂದ 500 ಮಂದಿ ಮಾತ್ರ ಕ್ವಿಜ್‌ನಲ್ಲಿ ಭಾಗವಹಿಸಬಹುದು.